ಕರ್ನಾಟಕ ಸರ್ಕಾರ

ಸಂಖ್ಯೆ:ತಾಂ.ಅ.ಸು.2:2003-2004

ನಿರ್ದೇಶಕರ ಕಛೇರಿ,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ,
ಬೆಂಗಳೂರು, ದಿನಾಂಕ 4-11-2003.

## ಸುತ್ತೋಲೆ.

ವಿಷಯ:- ರೆವಿನ್ಯೂ ಕ್ರಮಕ್ಕಾಗಿ ಬಾಕಿ ಇರುವ ಪ್ರಕರಣಗಳನ್ನು ಪೋಡಿ ವಹಿಯಲ್ಲಿ ನಮೂದಿಸುವ ಕ್ರಮ ಕುರಿತು.

ಉಲ್ಲೇಖ:- 1. ಸುತ್ತೋಲೆ ಸಂಖ್ಯೆ:ತಾಂ.ಅ.25:89-90 ದಿನಾಂಕ 06-10-89.
2. ಸುತ್ತೋಲೆ ಸಂ:ಸಿ.ಅ.44:90-91 ದಿ:12-10-90.
3. ಜುಲೈ ಮಾಹೆ ಪ್ರಗತಿ ಪರಿಶೀಲನೆ.

—:—

ಉಲ್ಲೇಖ (1) ರ ಸುತ್ತೋಲೆಯಲ್ಲಿ ಇಲಾಖಾ ಭೂದಾಖಲೆಗಳ ಜಂಟಿ ನಿರ್ದೇಶಕರವರುಗಳ ಪ್ರಗತಿ ಸಮೀಕ್ಷೆ ಸಭೆಯಲ್ಲಿನ ನಿರ್ಣಯದಂತೆ ಕಂದಾಯ ಕ್ರಮಕ್ಕಾಗಿ ಬಾಕಿ ಇದ್ದಂತ ಪ್ರಕರಣಗಳ ಎಂಟ್ರಿ ವಿವರಗಳನ್ನು ಸಂಬಂಧಿಸಿದ ವಹಿಗಳಲ್ಲಿ ಕ್ರಮಾಂಕಗಳನ್ನು ಗುಂಡು ಸುತ್ತಿ ವಿಲೇಗೊಳಿಸಲು ಸೂಚಿಸಲಾಗಿತ್ತು. ನಂತರ ಉಲ್ಲೇಖ (2) ರ ಸುತ್ತೋಲೆಯಲ್ಲಿ ಹಿಂದಿನ ಸಂಬಂಧಿಸಿದ ಎಲ್ಲಾ ಸುತ್ತೋಲೆಗಳನ್ನು ರದ್ದುಗೊಳಿಸಿ, ಕಂದಾಯ ಕ್ರಮಕ್ಕೆ ಕಳಿಸಿದ ಪ್ರಕರಣಗಳ ಕಡತಗಳ ಮಾಹಿತಿಯನ್ನು ಎಂಟ್ರಿಯನ್ನು ಸಂಬಂಧಿಸಿದ ವಹಿಗಳಲ್ಲಿ ಕ್ರಮಾಂಕಗಳನ್ನು ಜೀವಂತವಾಗಿಡಲು ಅಂದರೆ ಗುಂಡು ಸುತ್ತದೇ ಅಂತಿಮವಾಗಿ ಮಾತ್ರ ಗುಂಡು ಸುತ್ತಲು : ವಿಲೇ ಮಾಡಲು ಸೂಚನೆ ನೀಡಿರುತ್ತೆ.

2. ಇಲಾಖೆಯಲ್ಲಿ ಕಂದಾಯ ಇಲಾಖೆಯಿಂದ ವಿವಿಧ ಪೋಡಿ ಪ್ರಕರಣಗಳಾದ (1) ದರಖಾಸ್ತು (2) ಅಲಿನೇಷನ್ (3) ಮ್ಯುಟೇಷನ್ (4) ಭೂಸುಧಾರಣೆ (5) ಭೂಸ್ವಾಧೀನ ಪ್ರಕರಣಗಳು ಸ್ವೀಕೃತವಾಗುತ್ತಿರುತ್ತವೆ. ಇಂತಹ ಪೋಡಿ ಪ್ರಕರಣಗಳು ಇಲಾಖೆಯಲ್ಲಿ 31-07-2003 ರ ಅಂತ್ಯಕ್ಕೆ ಸುಮಾರು 2.3 ಲಕ್ಷ ಪೋಡಿ ಪ್ರಕರಣಗಳು ಬಾಕಿ ಇರುವುದು, ಪ್ರಗತಿ ಪುನರ್ ವಿಲೋಕನದಿಂದ ವ್ಯಕ್ತವಾಗಿರುತ್ತದೆ. ಈ ಬಾಕಿ ಪ್ರಕರಣಗಳಿಗೆ ಹಲವು ಕಾರಣಗಳಿದ್ದರೂ ಸಹ ಬಹಳಷ್ಟು ಪ್ರಕರಣಗಳು ಕಂದಾಯ ಕಾರ್ಯಕ್ರಮಕ್ಕಾಗಿ ಬಾಕಿ ಉಳಿದಿರುವುದು ನಿರ್ದೇಶನಾಲಯದ ಗಮನಕ್ಕೆ ಬಂದಿರುತ್ತದೆ. ಇಂತಹ ಪ್ರಕರಣಗಳನ್ನು ಕಂದಾಯ ಕ್ರಮಕ್ಕಾಗಿ ಸಂಬಂಧಿಸಿದ ಕಛೇರಿಗಳಿಗೆ ಕಳುಹಿಸಿದ ನಂತರ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಗಳ ವಹಿಗಳಲ್ಲಿ ಕ್ರಮಾಂಕಗಳನ್ನು ಮುಕ್ತಾಯ ಗೊಳಿಸದೇ ಇದ್ದುದರಿಂದ ಇಲಾಖೆಯಲ್ಲಿ ಭೌತಿಕವಾಗಿ ಪ್ರಕರಣಗಳು ಬಾಕಿ ಇಲ್ಲದಿದ್ದರೂ ಸಹ ಅಂಕಿ ಅಂಶಗಳಲ್ಲಿ ಮಾತ್ರ ಈ ಬೃಹತ್ ಬಾಕಿ ಇರುವುದು ಸರ್ವೆ ಸಾಮಾನ್ಯ ವಿಶೇಷವಾಗಿದೆ. ಈ ಬಾಕಿ ಇರುವುದನ್ನೇ ಸರ್ಕಾರದ ಮಟ್ಟದಲ್ಲಿ ಸಹ ತೀವ್ರವಾಗಿ ಪರಿಗಣಿಸಿರುತ್ತಾರೆ.

3. ಮೇಲಿನ ಅಂಶಗಳನ್ನು ಮತ್ತು ಉಲ್ಲೇಖ (2) ರ ಸುತ್ತೋಲೆಯಲ್ಲಿನ ಧ್ಯೇಯಗಳ ಸಫಲತೆಯನ್ನು ಪ್ರಗತಿ ಪರಿಶೀಲನಾ ಅವಧಿಯ ಸಮೀಕ್ಷೆಯಲ್ಲಿ ಅವಲೋಕಿಸಲಾಗಿ, ಹಿಂದಿನ ಸುತ್ತೋಲೆಯ ಧ್ಯೇಯಗಳು ಮತ್ತು ಇಲಾಖೆಯಲ್ಲಿ ಪ್ರಸ್ತುತ ಬಾಕಿ ಎಂದು ತೋರಿಸುತ್ತಿರುವ ಪೋಡಿ ಕಡತಗಳ ಸಂಖ್ಯೆಯು ವಾಸ್ತವಾಂಶಕ್ಕೆ ವಿರುದ್ಧವಾಗಿರುವುದರಿಂದ, ಸುತ್ತೋಲೆಗಳನ್ನು ಪುನರ್ ಪರಿಶೀಲನೆ ಮಾಡಿ, ಕೆಳಕಂಡ ಸೂಚನೆಗಳನ್ನು ಕಟ್ಟುನಿಟ್ಟಿನ ಅನುಸರಣೆಗಾಗಿ ನೀಡಿದೆ.

1. ಕಂದಾಯ ಕ್ರಮಕ್ಕಾಗಿ ಬಾಕಿ ಇರುವಂತಹ ಕಡತಗಳನ್ನು ಇನ್ನು ಮುಂದೆ ಕಂದಾಯ ಕ್ರಮಕ್ಕಾಗಿ ಕಳುಹಿಸುವಾಗ ಕ್ರಮ ಸಂಖ್ಯೆಯನ್ನು ಸೂಕ್ತ ಷರಾ (ಕಾರಣವನ್ನು ಸಂಕ್ಷಿಪ್ತವಾಗಿ ವಿವರಿಸಿ) ಬರೆದು, ಗುಂಡು ಸುತ್ತಿ ವಿಲೇಗೊಳಿಸಲು ಸೂಚಿಸಿದೆ.
2. ಕಂದಾಯ ಕ್ರಮಕ್ಕಾಗಿ ಕಳುಹಿಸುವ ಎಲ್ಲಾ ಕಡತಗಳಲ್ಲಿ ಸಮಗ್ರವಾಗಿ ತಾಂತ್ರಿಕ ವಿಷಯದಲ್ಲಿ ಅಂದರೆ ಬಾಂಡುಮ್ಯಾಪು, ವಿಸ್ತೀರ್ಣ, ನಕಾಶೆಯಲ್ಲಿ ಪ್ಲಾಟಿಂಗ್ ಮುಂತಾದ ಕೆಲಸಗಳ ಪರಿಶೀಲನೆ ಮಾಡಿ, ತದನಂತರ ಕಡತದಲ್ಲಿನ ಕಂದಾಯ ಕ್ರಮದ ಎಲ್ಲಾ ಅಂಶಗಳನ್ನು ಒಂದೇ ಹಂತದಲ್ಲಿ ತಪಾಸಣೆ ಮಾಡಿ, ಕಂದಾಯ

ಕ್ರಮಕ್ಕೆ ಕಳುಹಿಸಬೇಕು. ಒಂದಾರು ಸಾರಿ ವಿವಿಧ ಕ್ರಮಗಳನ್ನು ಗುರುತಿಸಿ, ಅನಾವಶ್ಯಕ ಕಡತ ರವಾನೆ ತಪ್ಪಿಸಲು ಸೂಚಿಸಿದೆ.

3. ಪ್ರಸ್ತುತ 31-10-2003 ರ ಅಂತ್ಯಕ್ಕೆ ಇಲಾಖಾ ಅಧೀನ ಕಛೇರಿಗಳಲ್ಲಿ ಎಲ್ಲಾ ಕಡತಗಳನ್ನು ಎಲ್ಲಾ ಹಂತಗಳಲ್ಲಿ ಭೌತಿಕವಾಗಿ ಪರಿಶೀಲನೆ ಮಾಡಿ, ವಹಿಯನ್ನು ಕಾಲೋಚಿತಗೊಳಿಸಿ, ಭೌತಿಕವಾಗಿ ಬಾಕಿ ನಿಂತಿರುವ ಕಡತವನ್ನು ಪ್ರೋಷ್ಟಾರಿಯಲ್ಲಿ ಬಾಕಿ ಕಾಲಂನಲ್ಲಿ ನಮೂದಿಸಲು ಮತ್ತು ನವೆಂಬರ್ ಮಾಹೆಗೆ ಪ್ರಾರಂಭಿಕ ಶಿಲ್ಕು ಸ್ವೀಕರಿಸಲು ಸೂಚಿಸಿದೆ. ಈ ಕೆಲಸವನ್ನು ಔಪಚಾರಿಕವಾಗಿ ಪೂರೈಸದೇ, ಶ್ರದ್ಧಾಮನಸ್ಸಿನಿಂದ ಕಾಲೋಚಿತಗೊಳಿಸತಕ್ಕದ್ದು. ಈ ಸಮಯದಲ್ಲಿ ಈ ಹಿಂದೆ ಕಂದಾಯ ಕ್ರಮಕ್ಕಾಗಿ ಕಳುಹಿಸಿದ ಬಾಬ್ತು ವಾಪಸ್ಸು ಬಂದಿರುವ : ಬರದೇ ಇರುವುದನ್ನು ಸಮಗ್ರ ಪರಿಶೀಲನೆಯಿಂದ ಕ್ರಮಾಂಕವನ್ನು ಷರಾದೊಂದಿಗೆ ಗುಂಡು ಸುತ್ತಿ ವಿಲೇಗೊಳಿಸುವುದು. ಎಲ್ಲಾ ಹೋಟಿ ವಹಿಗಳಲ್ಲಿ ಆಗಿಂದಾಗ್ಗೆ ಚಲನವಲನಗಳನ್ನು ತಪ್ಪದೇ ನಮೂದಿಸುವುದು ಕಡ್ಡಾಯಗೊಳಿಸಿದೆ. ಮಾಹೆವಾರು ಪ್ರೋಷ್ಟಾರಿಗಳನ್ನು ಬರೆಯುವಾಗ ವಿಲೇ ಕಾಲಂನಲ್ಲಿ ಬೆಟ್ಟನದಾಗಿ ಕಂದಾಯ ಕ್ರಮಕ್ಕಾಗಿ : ಅಂತಿಮ ದುರಸ್ತು ಒಟ್ಟು ವಿಲೇ ಕಾಲಂಗಳನ್ನು ಅಳವಡಿಸಿಕೊಳ್ಳುವುದು. (ನಮೂನೆ ಲಗತ್ತಿಸಿದೆ ) ಉಳಿದಂತೆ ದುರಸ್ತಿಯಾದ ಪ್ರಕರಣಗಳ ಬಾಬ್ತು ಮತ್ತು ಕಂದಾಯ ಕ್ರಮಕ್ಕಾಗಿ ಕಳುಹಿಸಿದ ಬಗ್ಗೆ ಪ್ರತ್ಯೇಕ ವಹಿಯನ್ನು ಈಗಾಗಲೇ ಜಾರಿಯಲ್ಲಿರುವಂತೆ ಮುಂದುವರೆಸುವುದು. ಕಂದಾಯ ಕ್ರಮದಿಂದ ವಾಪಸ್ಸು ಬಂದ ಕಡತಗಳಿಗೆ ಹೊಸ ನಂಬರ್ ದಾಖಲಿಸತಕ್ಕದ್ದು ಮತ್ತು ಹಿಂದಿನ ಭೂ.ಸ.ನಿ. ನಂಬರ್ ಮತ್ತು ತಾಲ್ಲೂಕು ಹೋಟಿ ನಂಬರುಗಳನ್ನು ರೆಫರೆನ್ಸ್‌ಗಾಗಿ ಕಡ್ಡಾಯವಾಗಿ ನಮೂದಿಸಲು ಸೂಚಿಸಿದೆ.

4. ಇಲಾಖೆಯ ಎಲ್ಲಾ ಪರಿಶೀಲನಾ ಅಧಿಕಾರಿಗಳು ಅವರುಗಳ ಪ್ರತಿ ಸಾರಿ ಭೇಟಿ ಸಮಯದಲ್ಲಿ ಮೇಲಿನ ಆದೇಶಗಳನ್ನು ಪರಿಪಾಲನೆ ಮಾಡಿರುವ ಬಗ್ಗೆ ವಹಿಗಳನ್ನು ಖುದ್ದಾಗಿ ಪರಿಶೀಲನೆ ಮಾಡಿ, ಸೂಕ್ತ ಆದೇಶಗಳನ್ನು ನೀಡಿ, ಕೆಲಸವನ್ನು ಅನುಷ್ಠಾನಗೊಳಿಸುವುದು ಮತ್ತು ಈ ಬಗ್ಗೆ ಕಡ್ಡಾಯವಾಗಿ ವಹಿಗಳಲ್ಲಿ ಸಹಿ ಮಾಡುವುದು.

5. ಮೇಲಿನ ಆದೇಶದ ಪರಿಪಾಲನೆಯಲ್ಲಿ ಯಾವುದೇ ಅಧಿಕಾರಿ : ನೌಕರರ ಲೋಪ ವಿಳಂಬವು ಕೆಳಕಂಡವರ ಗಮನಕ್ಕೆ ಕಂಡು ಬಂದಲ್ಲಿ ಗಂಭೀರವಾಗಿ ಪರಿಗಣಿಸಲಾಗುವುದಾಗಿ ತಿಳಿಯಪಡಿಸಿದೆ.

6. ಸುತ್ತೋಲೆ ಸ್ವೀಕೃತಿ ಬಗ್ಗೆ ವರದಿ ನೀಡುವುದು.

(ಸಹಿ)
ನಿರ್ದೇಶಕರು,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳು, ಬೆಂಗಳೂರು.

ಪ್ರತಿಯನ್ನು :—
ಇಲಾಖಾ ಎಲ್ಲಾ ಅಧೀನ ಕಛೇರಿಗಳಿಗೆ ಅವಶ್ಯ ಕ್ರಮಕ್ಕಾಗಿ ರವಾನಿಸಿದೆ.

ನಿರ್ದೇಶಕರ ಪರವಾಗಿ
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು.

4-11-03

ಡಿಬಿಎಸ್.